**ಪಿಡಬ್ಲ್ಯೂ-1**

**ದಿನಾಂಕಃ 16-09-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ಪಾರ್ಟೀ ಸವಾಲು ಶ್ರೀ ಕೆ.ವಿ.ಹೆಚ್. ವಕೀಲರಿಂದಃ-**

ನಾನು ನನ್ನತಾಯಿ ಸೇರಿ ಜೀವನಾಂಶ ಕೋರಿ ಎದುರುದಾರರ ವಿರುದ್ಧ ಕ್ರಿಮಿನಲ್ ಮಿಸ್ ನಂ.**119/1997** ರ ಅರ್ಜಿಯನ್ನು ಸಲ್ಲಿಸಿದ್ದು ಅದು ಪುರಸ್ಕೃತಗೊಂಡಿದೆ ಎಂದರೆ ಆಗಿರಬಹುದು. ಸದರಿ ವಿಷಯ ಸುಮಾರು **5** ವರ್ಷಗಳ ಹಿಂದೆ ಗೊತ್ತಾಯಿತು. ವಸೂಲಾತಿ ಅರ್ಜಿ ಮಿಸ್ ನಂ.**11/2002** ನ್ನು ನಾವು ಹಾಕಿರುವ ವಿಚಾರ ಗೊತ್ತು. ಆ ಅರ್ಜಿಯಲ್ಲಿ ಒಂದೇ ಬಾರಿಗೆ ನನ್ನ ತಂದೆ ಹಣ ಕೊಡುವುದಾಗಿ ರಾಜಿ ಪಂಚಾಯ್ತಿ ಆಗಿ ಹಣ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ನನ್ನ ಅರ್ಜಿಯಲ್ಲಿ ಬರೆಸಿರುತ್ತೇನೆ. ಆದರೆ ಈ ಅರ್ಜಿಯನ್ನು ನನ್ನ ತಂದೆಯ ವಿರುದ್ಧ ನನ್ನ ಮದುವೆಯ ಖರ್ಚಿಗಾಗಿ **10** ಲಕ್ಷ ಕೊಡಬೇಕೆಂದು ಹಾಕಿರುತ್ತೇನೆ. ಅದರಲ್ಲಿ ನಾನು, ನನ್ನ ತಾಯಿ ರೂ. **75,000/-** ಶಾಶ್ವತ ಜೀವನಾಂಶ ಪಡೆದಿರುತ್ತೇವೆಂದರೆ ಅದು ನನ್ನ ತಾಯಿಗೆ ಗೊತ್ತು ನಾನು ಚಿಕ್ಕವಳಾಗಿರುತ್ತೇನೆ. ಈಗಲೂ ನಾನು ನನ್ನ ತಾಯಿ ಜೊತೆ ಇದ್ದೇನೆ. ನಂತರ ಕ್ರಿಮಿನಲ್ ಮಿಸ್. ನಂ.**397/2018** ನ್ನು ನಾನು ಜೀವನಾಂಶ ಕೋರಿ ನನ್ನ ತಂದೆ ವಿರುದ್ಧ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಅದು ವಜಾಗೊಂಡಿರುತ್ತದೆ ಎಂದರೆ ಸರಿ. ಆ ಅರ್ಜಿಯಲ್ಲೂ ನನ್ನ ಮದುವೆ ಖರ್ಚಿಗಾಗಿ **10** ಲಕ್ಷ ಬೇಕು ಎಂದು ನನ್ನ ತಂದೆಯ ವಿರುದ್ಧ ಕೇಳಿದ್ದೆ ಎಂದರೆ ಸರಿ. ನಾನು ಇಲ್ಲಿಯವರೆಗೂ ಮದುವೆ ಮಾಡಿಕೊಳ್ಳಲು ವರನನ್ನು ಹುಡುಕಿಲ್ಲ. ನನ್ನ ತಾಯಿ ಇನ್ನೊಂದು ಮದುವೆ ಆಗಿಲ್ಲ. ನಾನು ಮತ್ತು ನನ್ನ ತಾಯಿ ಅರಸೀಕೆರೆಯ ಜೇನುಕಲ್ ನಗರದ ಬಾಡಿಗೆ ಮನೆಯಲ್ಲಿ ವಾಸವಿದ್ದೇವೆ. ನಾನು ಹುಟ್ಟಿದಾಗಿನಿಂದ ನಾನು ನನ್ನ ತಾಯಿಯ ಜೊತೆಯಲ್ಲೇ ಇದ್ದೇನೆ. ನನ್ನ ತಂದೆ ತಾಯಿ ನಡುವೆ ವಿಚ್ಛೇದನೆ ಆಗಿದೆ ಎಂದರೆ ಸರಿ. ನಂತರ ನನ್ನ ತಂದೆ ಬೇರೆ ಮದುವೆಯಾಗಿ ಮಕ್ಕಳು ಇದ್ದಾವೆ ಎಂದರೆ ಸರಿ. ನನ್ನ ತಂದೆಗೆ ರಸ್ತೆ ಅಪಘಾತದಲ್ಲಿ ಕಾಲಿಗೆ ಪೆಟ್ಟಾಗಿ ರಾಡ್ ಅಳವಡಿಸಲಾಗಿದೆ ಎಂದರೆ ಗೊತ್ತಿಲ್ಲ. ನಾನು ನನ್ನ ತಾಯಿ ಈಗಾಗಲೇ

ಎದುರುದಾರರಿಂದ ಜೀವನಾಂಶದ ಹಣವನ್ನು ಪಡೆದಿದ್ದು ಆ ಕಾರಣದಿಂದ ಈ ಅರ್ಜಿ ನಿಲ್ಲತಕ್ಕದ್ದಲ್ಲ ಎಂದರೆ ಸರಿಯಲ್ಲ.

ನಾನು ಕೂಲಿ ಕೆಲಸ ತಾತ್ಕಾಲಿಕವಾಗಿ ಮಾಡುತ್ತೇನೆ. ನಾನು ಪುಸ್ತಕ ಅಂಗಡಿಯಲ್ಲಿ ರಾತ್ರಿ **8-00** ರವರೆಗೆ ಕೆಲಸ ಮಾಡುತ್ತೇನೆ. ನಾನು ತಿಂಗಳಿಗೆ **20** ಸಾವಿರ ಗಳಿಸುತ್ತೇನೆ ಎಂದರೆ ಸರಿಯಲ್ಲ. ಈಗ ದಿನಗೂಲಿ ಕನಿಷ್ಟ **300** ರೂ. ಇದೆ ಎಂದರೆ ಸಾಕ್ಷಿ ದಿನ ಸಿಗುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಸಾಕಷ್ಟು ಆದಾಯ ಇದ್ದರೂ ಅದನ್ನು ತೋರಿಸದೇ ಎದುರುದಾರರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **16-09-2025.**